■ ವಿಶಾಖ ಎನ್.

# ಮಿಕಭಾವವೂ ನೆಪೋಟಿಸಮ್ಮೂ...

ಸ್ವಜನ ಪಕ್ಷಪಾತ ಅಥವಾ ನೆಪೋಟಿಸಂ ಬಗೆಗೆ ಹಿಂದಿ ಚಿತ್ರರಂಗದಲ್ಲಿ ಚರ್ಚೆ ನಿರಂತರ ನಡೆದೇ ಇದೆ. ಗೋವಾದಲ್ಲಿ ನಡೆಯುತ್ತಿರುವ 'ಭಾರತೀಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ'ದಲ್ಲೂ ('ಇಫಿ'ಯಲ್ಲೂ) ಇದೇ ವಿಷಯದ ಕುರಿತು ನಿರ್ದೇಶಕ ಲವ್ ರಂಜನ್ ಮಾತನಾಡಿದರು.

ಅವರು ಸಂವಾದದಲ್ಲಿ ಪ್ರಶ್ನೆಗಳಿಗೆ ಮುಖಾಮುಖಿಯಾದಾಗ, 'ಸ್ವಜನ ಪಕ್ಷಪಾತದ ಸೊಲ್ಲಿನ ಕುರಿತು ಏನು ಹೇಳುವಿರಿ' ಎಂದು ಸಿನಿಮಾ ವಿದ್ಯಾರ್ಥಿಯೊಬ್ಬರು ಪ್ರಶ್ನಿಸಿದರು.



ಅದಕ್ಕೆ ಲವ್ ಕೊಟ್ಟ ಉತ್ತರ ಹೀಗಿತ್ತು: 'ನೆಪೋಟಿಸಂ ಎನ್ನುವುದು ಬದುಕಿನ ಭಾಗ. ಯಾವಾಗಲೂ ನಮಗೆ ಬೇಕಾದವರಿಗೆ ಅನುಕೂಲ ಮಾಡಿಕೊಡಲು ಅಥವಾ ಅವಕಾಶ ದಕ್ಕಿಸಿಕೊಡಲು ಅನೇಕರು ಪ್ರಯತ್ನಿಸುತ್ತೇವೆ. ಚಿತ್ರರಂಗ ಕೂಡ ಇದಕ್ಕೆ ಹೊರತಲ್ಲ. ಯಾವುದೇ ನಟ ಅಥವಾ ನಟಿ ಮೊದಲ ಸಿನಿಮಾದಲ್ಲಿ ಕಾಣಿಸಿಕೊಳ್ಳುವುದು ತುಂಬಾ ಮಹತ್ವದ ಘಟ್ಟ. ಮೊದಲ ಸಿನಿಮಾ ಅಥವಾ ಎರಡನೇ ಸಿನಿಮಾದಲ್ಲಿ ಪ್ರತಿಭೆ ಗುರುತಾಗಬಹುದು, ಅದೃಷ್ಟ ಒಲಿಯಬಹುದು. ಹಾಗೆಂದಮಾತ್ರಕ್ಕೆ ಮುಂದಿನ ವೃತ್ತಿ ಬದುಕಿನುದ್ದಕ್ಕೂ ಅದೇ ಕಾಪಾಡುತ್ತದೆ ಎಂದಲ್ಲ. ಅಲ್ಲಿಂದಾಚೆಗೆ ಪರಿಶ್ರಮ, ಪ್ರತಿಭೆ ಇದ್ದರಷ್ಟೆ ಗೆಲುವು. ಯಾರದೋ ಶ್ರೀರಕ್ಷೆ ಇದೆಯೆಂದಮಾತ್ರಕ್ಕೆ ಸದಾಕಾಲ ಅವಕಾಶಗಳು ಸಿಗುವುದಿಲ್ಲ.'

ಲವ್ ಇನ್ನೂ ಮುಂದೆ ಹೋಗಿ, 'ವಿಕ್ಟಿಮ್ ಸಿಂಡ್ರೋಮ್' ಎಂಬ ಪದಪುಂಜಗಳನ್ನು ತೇಲಿಬಿಟ್ಟರು. ನೆಪೋಟಿಸಂ ಒಂದನ್ನೇ ಉಲ್ಲೇಖಿಸುತ್ತಾ, ಅದರಿಂದಲೇ ತಮಗೆ ಅವಕಾಶ ತಪ್ಪುತ್ತಿದೆ ಎಂದು ದೂರುವವರನ್ನು ಕುರಿತ ಮಾನಸಿಕ ಸಂಗತಿ ಇದು. ತಾವು ಮಿಕವಾಗುತ್ತಿದ್ದೇವೆ ಎಂಬ ಭಾವನೆಯಿಂದ ಅಂಥವರು ಉಳಿದವರನ್ನು ದೂರುತ್ತಾರೆ. ಇನ್ನು ಕೆಲವರಿಗೆ ತಮ್ಮಷ್ಟು ಪ್ರತಿಭಾವಂತರು ಯಾರೂ ಇಲ್ಲ ಎನ್ನುವ ಭಾವನೆ ಇರುತ್ತದೆ. ಇಂಥವರು ಕೂಡ ತಮಗೆ ಸಿನಿಮಾಗಳು ಸಿಗದೆ ಹೋದಾಗ ನೆಪೋಟಿಸಂ ಎಂದು ಬೊಬ್ಬೆ ಹೊಡೆಯುತ್ತಾರೆ. ಪ್ರತಿಭಾವಂತರಿಗೆ ಆತ್ಮವಿಶ್ವಾಸ ಇರಬೇಕು, ಸರಿ. ಆದರೆ, ಬೇರೆಯವರು ಪ್ರತಿಭಾವಂತರಲ್ಲ ಎನ್ನುವ ಅಭಿಪ್ರಾಯಕ್ಕೆ ಬರುವುದು ತಪ್ಪು ಎಂದು ಲವ್ ತಮ್ಮ ವಿಚಾರ ಪ್ರತಿಪಾದಿಸಿದರು.

ರಣಬೀರ್ ಕಪೂರ್ ಹಾಗೂ ಶ್ರದ್ಧಾ ಕಪೂರ್ ಜೋಡಿಯ ಸಿನಿಮಾವೊಂದನ್ನು ಲವ್ ನಿರ್ದೇಶಿಸಲಿದ್ದಾರೆ. 'ಪ್ಯಾರ್ ಕಾ ಪಂಚನಾಮ 3' ಕೂಡ ಅವರ ಲಿಸ್ಟ್‌ನಲ್ಲಿ ಇದೆ. ■

## ಆಸ್ಕರ್ ಅಂಗಳಕೆ ಹೋಗುವ ಬಾರಾ...

'ಚೆಲೊ ಶೋ' ಗುಜರಾತಿ ಸಿನಿಮಾ ಆಸ್ಕರ್‌ಗೆ ಭಾರತದಿಂದ ನಾಮನಿರ್ದೇಶಿತವಾಗಿರುವುದು ಗೊತ್ತೇ ಇದೆ. ಇದು ಅಧಿಕೃತ. ಆದರೆ, ಖಾಸಗಿಯಾಗಿಯೂ ಆಸ್ಕರ್‌ಗೆ ನಾಮನಿರ್ದೇಶನಗೊಳ್ಳುವ ದಾರಿಯೊಂದು ಇದೆ ಎನ್ನುವುದು ರಾಜಮೌಳಿ ಹಾಗೂ ತಂಡದವರ ಅಂಬೋಣ. ಆ ದಾರಿಯಲ್ಲಿ ಸಾಗಲೆಂದೇ 80 ಕೋಟಿ ರೂಪಾಯಿಯನ್ನು ರಾಜಮೌಳಿ ಹಾಗೂ ಸ್ನೇಹಿತರು ಎತ್ತಿಟ್ಟಿದ್ದಾರೆನ್ನುವ ಸುದ್ದಿ ಇದೆ.

ಸಿನಿಮಾ ಗೆಲ್ಲುವುದು ಈಗ ಹಳೆಯ ವಿದ್ಯಮಾನ. ಗೆದ್ದ ನಂತರ ಯಶಸ್ಸನ್ನು ಇನ್ನಷ್ಟು ಉಜ್ವಲ ಮಾರ್ಗಗಳನ್ನು ಹುಡುಕುವುದು ಹೊಸ ವರಸೆ. 'ಕಾಂತಾರ' ಕನ್ನಡ ಚಿತ್ರ ನೋಡಿ ರಜನೀಕಾಂತ್ ಅವರಿಂದ ಶಾಲು ಹೊದೆಸಿಕೊಂಡು ರಿಷಬ್ ಶೆಟ್ಟಿ ಕೃತಾರ್ಥರಾಗಿದ್ದು ದೊಡ್ಡ ಸುದ್ದಿಯಾಗಿತ್ತು. ಮೊನ್ನೆ ಮೊನ್ನೆ ಕಮಲ ಹಾಸನ್ ಅವರಿಗೂ ಆ ಸಿನಿಮಾ ತೋರಿಸಿ, ರಿಷಬ್ ಮೆಚ್ಚುಗೆ ಪಡೆದದ್ದೂ ಸದ್ದು ಮಾಡಿತು.

'ಆರ್‌ಆರ್‌ಆರ್' ಸಿನಿಮಾವನ್ನು ಆಸ್ಕರ್ ಅಂಗಳಕ್ಕೆ ತೆಗೆದುಕೊಂಡು ಹೋಗಿ, ಇನ್ನಷ್ಟು ದೂಳೆಬ್ಬಿಸಬೇಕು ಎಂದು ರಾಜಮೌಳಿ ನಿರ್ಧರಿಸಿದ್ದಾರಂತೆ. ಅದಕ್ಕೆ ಜೂನಿಯರ್ ಎನ್‌ಟಿಆರ್ ಹಾಗೂ ರಾಮ್‌ಚರಣ್ ಇಬ್ಬರೂ ಸಾಥ್ ನೀಡಿದ್ದಾರಂತೆ. ■

